# ಪ್ರಥಮ ಬಿ.ಎ. ಪದವಿ ಪರೀಕ್ಷೆ

## ಆಗಸ್ಟ್ /ಸೆಪ್ಟೆಂಬರ್ 2011

## ಅಂಚೆ ಮತ್ತು ತೆರಪಿನ ಶಿಕ್ಷಣ

(ಹೊಸಬರಿಗೆ / ಹಳಬರಿಗೆ)

## ಬಸವ ತತ್ವ

ಪತ್ರಿಕೆ – ೧: ಬಸವ ತತ್ವ ಪ್ರದಿಪೀಕೆ

*ಘಂಟೆ: 3 hrs]* *ಅಂಕಗಳು: 70 / 80*

**ಸೂಚನೆಗಳು:**

1. *30 ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು 70 ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*
2. *20 ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು 80 ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*
3. *ವಿಶೇಷ ಸೂಚನೆ: ಹೊಸಬರು ಇ – ವಿಭಾಗದ ಪ್ರಶ್ನೆಯನ್ನು ಕಡ್ಡಾಯವಾಗಿ ಉತ್ತರಿಸಬೇಕು.*

## ವಿಭಾಗ – ಎ

I. ಯಾವುದಾದರೂ ಎರಡು ವಚನಗಳನ್ನು ವಿಶ್ಲೇಷಿಸಿ. $2 \times 5 = 10$

ಅ) ಅಚ್ಚ ಶಿವೈಕ್ಯರಿಗೆ ಹೊತ್ತಾರೆ ಅಮಾವಾಸ್ಯೆ
ಮಟ್ಟ ಮಧ್ಯಾಹ್ನ ಸಂಕ್ರಾಂತಿ ಮತ್ತೆ ಅಸ್ತಮಾನ
ಪೌರ್ಣಿಮೆ ಎಂಬುದಿಲ್ಲ, ಭಕ್ತನ ಮನೆಯ ಅಂಗಳವೇ
ವಾರಣಾಸಿ ಕಾಣಾ ರಾಮನಾಥ

ಆ) ಸತ್ಯವ ನುಡಿವುದೇ ದೇವಲೋಕ ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ ಅನಾಚಾರವೇ ನರಕ
ಇದು ಸತ್ಯ ಕೂಡಲ ಸಂಗಮ ದೇವ

ಇ) ಕಾಯಕದಲ್ಲಿ ನಿರತನಾದೊಡೆ ಗುರುದರುಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

## ವಿಭಾಗ – ಬಿ

II. ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ. $2 \times 10 = 20$

ಅ) ಬಸವಣ್ಣನವರ ಸಾಮಾಜಿಕ ಆಂದೋಲನದ ಬಗ್ಗೆ ಬರೆಯಿರಿ

ಆ) ಶರಣರ ಪಾಪಮಣ್ಯ ಪರಿಕಲ್ಪನೆ ಯಾವುದು? ವಿಶ್ಲೇಷಿಸಿ.

ಇ) ದೇವಾಲಯಗಳ ಅಗತ್ಯವಿದೆಯೆ? ಪರಿಶೀಲಿಸಿ.

*Contd... 2*

83

## ವಿಭಾಗ – ಸಿ

## ನಿಜಾಚರಣೆ

*III.* ಯಾವುದಾದರೂ ಎರಡು ಸಂದರ್ಭಗಳ ಸರಳ ಆಚರಣೆಯನ್ನು ವಿವರಿಸಿ. 2 x 5 = 10

ಅ) ಕಲ್ಯಾಣ ಮಹೋತ್ಸವ

ಆ) ನೂತನ ಕಟ್ಟಡ ಪ್ರವೇಶ

ಇ) ಅಂಗಡಿ ಪೂಜೆ

## ವಿಭಾಗ – ಡಿ

## ವಿಶ್ವಧರ್ಮಗಳು ಮತ್ತು ಧರ್ಮಗಳ ಸಮನ್ವಯ

*IV.* ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ: 3 x 10 = 30

ಅ) ಉಪನಿಷತ್ತುಗಳು ಮುಖ್ಯವಾಗಿ ಏನನ್ನು ಸಾರುತ್ತವೆ? ವಿವರಿಸಿ

ಆ) ಜೈನ ಧರ್ಮದ ಸಪ್ತ ತತ್ವಗಳು ಯಾವುವು? ವಿವರಿಸಿ.

ಇ) ಇಸ್ಲಾಂ ಧರ್ಮದ ಸಾರಾಂಶ ಮತ್ತು ಸಾಮಾಜಿಕ ನಿಬಂಧನೆಗಳು ಯಾವುವು? ವಿವರಿಸಿ.

ಈ) ಝುರಾತುಷ್ಟ್ರನ ಬೋಧನೆಗಳನ್ನು ವಿವರಿಸಿ.

## ವಿಭಾಗ – ಇ

*ವಿಶೇಷ ಸೂಚನೆ: ಹೊಸಬರು ಈ ಪ್ರಶ್ನೆಯನ್ನು ಕಡ್ಡಾಯವಾಗಿ ಉತ್ತರಿಸಬೇಕು.* 1 x 10 = 10

ಅ) ಗುರುನಾನಕರ ಧರ್ಮಬೋಧೆಯನ್ನು ವಿವರಿಸಿ.

* * * * * * *